ಅದು ತನ್ನ ಭ್ರಮೆ ಎಂಬುದು ಶೀಘ್ರವೇ ಅವಳಿಗೆ ಗೊತ್ತಾಯಿತು.

ಮಗಳು ಮನೆಗೆ ಬಂದಳು ಖರೆ. ಎಲ್ಲಾ ವಿಚಾರಗಳನ್ನು ಕೇಳಿ ತಿಳಿದುಕೊಂಡಳು ಕೂಡ. ಅವಳು ಅಮ್ಮನಲ್ಲಿ ಹೇಳಿದ್ದು, "ಅಣ್ಣ–ಅತ್ತಿಗೆ ಇರುವಾಗ ನಾನು ಅಪ್ಪನನ್ನು ವೈದ್ಯರಲ್ಲಿ ಕರೆದುಕೊಂಡು ಹೋಗುವುದು ಉಚಿತವಾಗುವುದಿಲ್ಲ ಆಯೀ. ಏನೇ ಆದರೂ ನಾನು ಈಗ ಬೇರೆ ಮನೆಗೆ ಸೇರಿದವಳು. ನಾಳೆ ಅಪ್ಪನಿಗೆ ಏನಾದರೂ ಹೆಚ್ಚು ಕಡಿಮೆಯಾದರೆ ಅವರೇ ನೋಡಬೇಕು ತಾನೇ." ಮಗಳ ಮಾತು ಕೇಳಿ ಸಾವಿತ್ರಿಯ ಮಾತು ತಡೆದು ನಿಂತಿತು. ಅವಳು ಏನು ತಿಳಿದುಕೊಳ್ಳಬೇಕು, ಅದು ಅವಳಿಗೆ ಚೆನ್ನಾಗಿ ತಿಳಿಯಿತು.

ಭಾವೂನ ವಿಚಿತ್ರ ವರ್ತನೆ ದಿನೇ ದಿನೇ ಹೆಚ್ಚುತ್ತಲೇ ಇತ್ತು. ಎಂಟು ದಿನಗಳ ಹಿಂದೆಯಂತೂ ಅದು ಕೈಮೀರಿ ಹೋಯಿತು.

ಆ ದಿನ ಸೀಮಾ ಮೈಸರಿಯಿಲ್ಲವೆಂದು ಕಚೇರಿಗೆ ಹೋಗದೆ ಮನೆಯಲ್ಲಿಯೇ ಇದ್ದಳು. ಬೆಳಗ್ಗೆಯಿಂದ ಅವಳು ಮಲಗಿಕೊಂಡೇ ಇದ್ದಳು. ಮಧ್ಯಾಹ್ನ ಎರಡೂವರೆ ಗಂಟೆಗೆ ಊಟ ಮುಗಿಸಿ ಅವಳು ಮತ್ತೆ ತನ್ನ ಕೋಣೆಗೆ ಬಂದು ಮಂಚದ ಮೇಲೆ ಅಡ್ಡಾಗಿದ್ದಳು. ಆ ಕೋಣೆಯ ಬಾಗಿಲು ಮುಚ್ಚಿರಲಿಲ್ಲ. ಹಗಲು ಹೊತ್ತು ಕೋಣೆಯ ಬಾಗಿಲು ಹಾಕಿಕೊಳ್ಳುವ ಪದ್ಧತಿ ಅವರ ಮನೆಯಲ್ಲಿ ಇರಲಿಲ್ಲ. ಭಾವೂ ಊಟ ಮಾಡಿ



ತನ್ನ ಕೋಣೆಯಲ್ಲಿ ಮಲಗಿದ್ದರು. ಅವರು ಎಂದಿನ ಹಾಗೆ ತಮ್ಮ ಅರ್ಧ ಉಡುಗೆಯಲ್ಲಿ ಇದ್ದರು. ಸಾವಿತ್ರಿ ಅಡುಗೆಕೋಣೆಯ ಕೆಲಸವನ್ನು ಮುಗಿಸಿ ಬಂದಳು. ಅವಳ ತಲೆಯಲ್ಲಿ ಗಂಡನದೇ ಚಿಂತೆ ಕಾಡುತ್ತಿತ್ತು. ಮಗನಾದರೆ ಪರವಾಗಿಲ್ಲ, ಆದರೆ ಸೊಸೆ, ಮೊಮ್ಮಗನ ಮುಂದೆ ಭಾವೂ ವರ್ತಿಸುವ ರೀತಿ ಅವಳಿಗೆ ತುಂಬಾ ನಾಚಿಕೆಯನ್ನು ಉಂಟು ಮಾಡುತ್ತಿತ್ತು. ತಾನು ಬದುಕುವುದೇ ಬೇಡವೆನಿಸುತ್ತಿತ್ತು. ಹೀಗೆ ನಾನಾ ರೀತಿಯ ಆಲೋಚನೆಗಳಲ್ಲಿ ಮುಳುಗಿದ್ದ ಅವಳಿಗೆ ಮಂಚದ ಮೇಲೆ ಮಲಗಿದ್ದಲ್ಲಿಯೇ ನಿದ್ದೆ ಹತ್ತಿದ್ದು ಗೊತ್ತಾಗಲೇ ಇಲ್ಲ. ಸ್ವಲ್ಪ ಹೊತ್ತಿನಲ್ಲಿ ಯಾರೋ ಜೋರಾಗಿ ಕಿರುಚಿದ್ದು ಕೇಳಿಸಿ ಸಾವಿತ್ರಿಗೆ ಎಚ್ಚರವಾಯಿತು. ಅವಳು ಪಕ್ಕದ ಮಂಚದ ಕಡೆಗೆ ದೃಷ್ಟಿ ಹಾಯಿಸಿದರೆ ಅಲ್ಲಿ ಭಾವೂ ಇರಲಿಲ್ಲ.

'ಅಯ್ಯೋ ಇವರು ಎಲ್ಲಿಯಾದರೂ ಎಡವಿ ಬಿದ್ದಿರಬಹುದೇ?' ಎಂದುಕೊಳ್ಳುತ್ತಾ ಆಕೆ ಎದ್ದು ಬಂದು ನೋಡಿದರೆ, ಭಾವೂ ಸೀಮಾಳ ಮಂಚದ ಮೇಲೆ ಕುಳಿತು, ಅವಳ ಎರಡೂ ಕೈಗಳನ್ನು ಹಿಡಿದು 'ಸಾವಿತ್ರೀ... ಸಾವಿತ್ರಿ..." ಎಂದು ಬಡಬಡಿಸುತ್ತಿದ್ದಾರೆ. ಸೀಮಾ ತನ್ನ ಕೈಗಳನ್ನು ಬಿಡಿಸಿಕೊಳ್ಳುವ ಪ್ರಯತ್ನವನ್ನು ನಡೆಸುತ್ತಾ ದೊಡ್ಡ ಧ್ವನಿಯಿಂದ ಕಿರುಚಾಡುತ್ತಿದ್ದಾಳೆ.

ಒಂದೆರಡು ಕ್ಷಣ ಬಾಗಿಲಿನ ಬಳಿ ಸ್ತಬ್ಧಳಾಗಿ ನಿಂತಿದ್ದ ಸಾವಿತ್ರಿ ಆಮೇಲೆ ಮುಂದೆ ಧಾವಿಸಿ ಭಾವೂನ ಕೈ ಎಳೆಯಲಾರಂಭಿಸಿದಳು. "ಇದೇನು ಮಾಡ್ತಾ ಇದ್ದೀರಾ ನೀವು? ಅವಳು ಸೀಮಾ, ನಿಮ್ಮ ಸೊಸೆ, ನಾನಲ್ಲ. ಅವಳ ಕೈ ಬಿಟ್ಟುಬಿಡಿ. ನಿಮ್ಮ ಸಾವಿತ್ರಿ ಇಲ್ಲಿದ್ದಾಳೆ ನೋಡಿ..." ಆದರೆ ಸಾವಿತ್ರಿಗೆ ಭಾವೂ ಕೈಗಳನ್ನು ಬಿಡಿಸಿಕೊಳ್ಳುವುದು ಸಾಧ್ಯವಾಗಲೇ ಇಲ್ಲ. ಕೊನೆಗೆ ಸೀಮಾ ಬಗ್ಗಿ ಭಾವೂನ ಮುಂಗೈಗೆ ಗಟ್ಟಿಯಾಗಿ ಕಚ್ಚಿದಳು. ಭಾವೂ ತಕ್ಷಣ ಕೈ ಬಿಟ್ಟು ಹಿಂದೆ ಸರಿದರು.

ಇದರಲ್ಲಿ ತನ್ನ ತಪ್ಪು ಏನೂ ಇಲ್ಲದಿದ್ದರೂ ಸಾವಿತ್ರಿ ಅಪರಾಧಿ ಸ್ಥಾನದಲ್ಲಿದ್ದಳು. ಅವಳು ಸೀಮಾಳಲ್ಲಿ ಕ್ಷಮೆ ಕೋರಿ ಗಂಡನನ್ನು ಕರೆದುಕೊಂಡು ಕೋಣೆಗೆ ಹಿಂತಿರುಗಿದಳು. ಸಂಜೆ ಮಗ ಮನೆಗೆ ಬಂದ ಬಳಿಕ ದೊಡ್ಡ ರಾಮಾಯಣವೇ ಘಟಿಸುವುದಿದೆ ಎಂಬುದನ್ನು